ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ ಪತ್ರಿಕೆಗಳು

ರಾಜ್ಯದಲ್ಲಿ ವಿಶೇಷ ರೀತಿಯ ಹಣ್ಣುಗಳ ತಳಿಯನ್ನು ಅಭಿವೃದ್ಧಿಪಡಿಸುವುದು

೬೫೪. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಆಥಣಿ).— ಮಾನ್ಯ ಕೃಷಿ ಹಾಗೂ ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ಬೆಳೆಯುವ ವಿಶೇಷ ರೀತಿಯ ಹಣ್ಣುಗಳ ತಳಿಯನ್ನು ಅಭಿವೃದ್ಧಿಪಡಿಸಲು ಯೋಚಿಸಲಾಗಿದೆಯೆ ?

(ಆ) ನಂಜನಗೂಡಿನ ಬಾಳೆಹಣ್ಣು ಹಾಗೂ ಗಂಜಾಂ ಅಂಜೂರದ ತಳಿಗಳು ಮಾಯವಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

(ಇ) ಇದೇ ತರದಲ್ಲಿ ಧಾರವಾಡ ಜಿಲ್ಲೆಯ ನವಿಲೂರ ''ಪೇರಲ'' ಹಿರೇಹಳ್ಳಿಯ ಬಾಳೆಹಣ್ಣು, ಮಧುಗಿರಿಯ ದಾಳಿಂಬೆಯೂ ಪ್ರಸಿದ್ಧಿಯಾಗಿದ್ದು ಇಂದು ಅವುಗಳ ಬೆಳವಣಿಗೆ ಕ್ಷೀಣಿಸಿರುವುದು ಸರ್ಕಾರದವರಿಂ ಗಮನಿಸಿದ್ದಾರೆಯೇ ?

(ಈ) ಈ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮಂತ್ರಿ ತೋಟಗಾರಿಕೆ ರಾಜ್ಯ ಸಚಿವರು).—

(ಅ) ಯೋಚಿಸಲಾಗಿದೆ.

(ಆ) ಬಂದಿದೆ.

(ಇ) ಗಮನಿಸಿದ್ದಾರೆ.

(ಈ) ನಂಜನಗೂಡಿನ ಬಾಳೆ ಹಣ್ಣಿನ ಅಭಿವೃದ್ಧಿಗೋಸ್ಕರ ನಂಜನಗೂಡಿನಲ್ಲಿ ಮೈಸೂರು ಆರಮನೆಗೆ ಸೇರಿದ ಸುಮಾರು ೭೦ ಎಕರೆ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಈ ವಿಚಾರ ನ್ಯಾಯಾಲಯದ ಮುಂದೆ ಇರುವುದರಿಂದ, ಮುಂದುವರಿಸಲು ತೊಂದರೆಯಾಗಿದೆ.

ಈಗಾಗಲೇ ಗಂಜಾಂ ಅಂಜೂರದ ತಳಿಗಳನ್ನು ಅಭಿವೃದ್ಧಿಗೊಳಿಸಲು ಗಂಜಾಂನಲ್ಲಿ, ಗಂಜಾಂನ ತೋಟಗಾರಿಕಾ ಕ್ಷೇತ್ರದಲ್ಲಿ ಈ ತಳಿಯ ಅಭಿವೃದ್ಧಿ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ.

ಮಧುಗಿರಿಯ ದಾಳಿಂಬೆ ಅಭಿವೃದ್ಧಿಪಡಿಸಲು ಈಗಾಗಲೇ ಮಧುಗಿರಿ ತಾಲ್ಲೂಕಿನ, ಬಡವನಹಳ್ಳಿ ತೋಟಗಾರಿಕಾ ಕ್ಷೇತ್ರದಲ್ಲಿ ತಳಿಯ ಅಭಿವೃದ್ಧಿ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ.

ನವಿಲೂರು ಪೇರಲ ಹಾಗೂ ಹಿರೇಹಳ್ಳಿಯ ಬಾಳೆಹಣ್ಣು ಅಭಿವೃದ್ಧಿಗೂ ೧೯೮೭–೮೮ನೇ ಸಾಲಿನಲ್ಲಿ ಕ್ರಮ ಕೈಗೊಳ್ಳಲಾಗುವುದು.

ಧಾರವಾಡ ನಗರದಲ್ಲಿ ಶೈತ್ಯಾಗಾರದ ನಿರ್ಮಾಣ

೬೪೦. ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ).— ಮಾನ್ಯ ಕೃಷಿ ಮತ್ತು ತೋಟಗಾರಿಕೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಧಾರವಾಡ ನಗರದ ಸುತ್ತಲಿನ ಪ್ರದೇಶದಲ್ಲಿನ ಎಷ್ಟು ಎಕರೆಯಲ್ಲಿ ಆಲೂಗಡ್ಡೆ ಬೆಳೆಯನ್ನು ಬೆಳೆಯಲಾಗುತ್ತಿದೆ.

(ಆ) ಆಲೂಗಡ್ಡೆ ಮುಂತಾದ ಕೃಷಿ ಉತ್ಪನ್ನಗಳನ್ನು ಸಂರಕ್ಷಿಸಲು ಶೀತಗಾರದ ಬೇಡಿಕೆ ಬಹು ದಿನಗಳಿಂದ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ, ಹಾಗಿದ್ದಲ್ಲಿ, ಅದನ್ನು ಎಂದು ಪ್ರಾರಂಭಿಸಲಾಗುವುದು.